ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/04/ಮಾಹಕಾ/2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 11-4-2018

**ಜ್ಞಾಪನ**

ವಿಷಯ:- ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1)ಎ ರನ್ವಯ ಕಡತಗಳ ಪಟ್ಟಿಯನ್ನು ತಯಾರಿಸಿ ಸಲ್ಲಿಸುವ ಬಗ್ಗೆ

ಉಲ್ಲೇಖ:-1. ಈ ಕಛೇರಿ ಅಧಿಸೂಚನೆ ಸಂ.ಡಿಟಿಇ 08 ಇಎಸ್‌ಟಿ(1)ಎ 2005 ದಿ: 8-2-2006

2. ಈ ಕಛೇರಿ ಜ್ಞಾಪನ ಸಂ. ಡಿಟಿಇ 76 ಮಾಹಕಾ 2016 ದಿ:1-3-2017

3. ಈ ಕಛೇರಿ ತಿಳಿವಳಿಕೆ ಪತ್ರಗಳ ಸಂ:ಡಿಟಿಇ/493/ಮಾಹಕಾ/2016 ದಿ:-26-4-2017, 24-01-2018

******

ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1)ಎ ರನ್ವಯ ಪ್ರತಿ ಶಾಖೆಯಲ್ಲಿರುವ ಕಡತಗಳನ್ನು ಅನುಕ್ರಮಣಿಕೆ/ಪಟ್ಟಿಯನ್ನು, ಹಾಗೂ ನಿಯಮ 4(1)ಬಿ ರನ್ವಯ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವೂ ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು ಸೇರಿದಂತೆ **ಒಟ್ಟು 17** ಅಂಶಗಳ ಬಗ್ಗೆ ಮಾಹಿತಿಯನ್ನು ಪ್ರತಿವರ್ಷವೂ ಕಾಲೋಚಿತಗೊಳಿಸಿ ತಮ್ಮ ತಮ್ಮ ಸಂಸ್ಥೆಗಳ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿರುತ್ತದೆ. ಈ ಬಗ್ಗೆ ಪ್ರತಿವರ್ಷವೂ ನಿರ್ದೇಶನಾಲಯದಿಂದ ಸೂಚನೆಗಳನ್ನು ನೀಡುತ್ತಾ ಬರಲಾಗಿದೆ. ಆದಾಗ್ಯೂ ಹಲವಾರು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ /ಇಂಜಿನಿಯರಿಂಗ್ ಕಾಲೇಜುಗಳು ಇದುವರೆಗೂ ತಮ್ಮ ತಮ್ಮ ಸಂಸ್ಥೆಗಳ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸದೇ ಇರುವುದು ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ.

ಈಗಾಗಲೇ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ **ಸರ್ಕಾರಿ/ ಅನುದಾನಿತ ಸಂಸ್ಥೆಗಳನ್ನು ಸಾರ್ವಜನಿಕ ಪ್ರಾಧಿಕಾರಗಳೆಂದು** ಉಲ್ಲೇಖ(1)ರಲ್ಲಿ ಅಧಿಸೂಚನೆ ಹೊರಡಿಸಿ, ಪ್ರಿನ್ಸಿಪಾಲರನ್ನು **ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ** ನೇಮಕಮಾಡಲಾಗಿದೆ. ಮಾಹಿತಿ ಹಕ್ಕು ಕಾಯ್ದೆ **2005 ಜೂನ್ 15** ರಿಂದ ಜಾರಿಗೆ ಬಂದಿದ್ದು, ಜಾರಿಯಾದ **120** ದಿನಗಳೊಳಗಾಗಿ ಎಲ್ಲ ಕಛೇರಿಗಳು ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 4(1)ಎ ಮತ್ತು 4(1)ಬಿ ಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸಬೇಕು ಎಂಬ ನಿಯಮವಿದ್ದು, ಸುಮಾರು **13 ವರ್ಷಗಳೇ** ಕಳೆದಿದ್ದರೂ ಇದುವರೆಗೂ ತಮ್ಮ ತಮ್ಮ ಸಂಸ್ಥೆಗಳ ವೆಬ್ ಸೈಟ್‌ನಲ್ಲಿ ಪ್ರಕಟಿಸದೇ ಇರುವುದನ್ನು **ಸರ್ಕಾರವೂ ಕೂಡ ಗಂಭೀರವಾಗಿ ಪರಿಗಣಿಸಿದೆ.**

ಈ ನಿಟ್ಟಿನಲ್ಲಿ ಎಲ್ಲಾ ಪ್ರಿನ್ಸಿಪಾಲರುಗಳು ತುರ್ತು ಕ್ರಮ ಕೈಗೊಂಡು ತಮ್ಮ ತಮ್ಮ ಸಂಸ್ಥೆಯ ವೆಬ್ ಸೈಟ್ ನಲ್ಲಿ 4(1) ಎ ಮತ್ತು 4(1)ಬಿ ಗೆ ಸಂಬಂಧಿಸಿದ ಮಾಹಿತಿಯನ್ನು **ಎರಡು ದಿನಗಳೊಳಗಾಗಿ** ಪ್ರಕಟಿಸುವುದು ತಪ್ಪಿದಲ್ಲಿ ತಮ್ಮ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದೆ.

ನಿರ್ದೇಶಕರು.

ಇವರಿಗೆ :

1. ಪ್ರಿನ್ಸಿಪಾಲರು, ಸರ್ಕಾರಿ /ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು
2. ಪ್ರಿನ್ಸಿಪಾಲರು, ಸರ್ಕಾರಿ /ಅನುದಾನಿತ ಪಾಲಿಟೆಕ್ನಿಕ್‌ಗಳು
3. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು
4. ಇ-ಆಡಳಿತ ವಿಭಾಗಕ್ಕೆ, ವೆಬ್ ಸೈಟ್ ನಲ್ಲಿ ಪ್ರಚುರಪಡಿಸಲು.